ಮೈಲಿರೋ ನರ ಎಲ್ಲಾ ಕಾಣೋ ಹಾಗೆ ಬಡಕಲಾದವರು, ಜಟೆ ಬಿಟ್ಟಕೊಂಡವರು, ತಲೆ ಬೋಳಿಸಿಕೊಂಡೋರು, ನಾರುಬಟ್ಟೆ ಸುತ್ತಿಕೊಂಡೋರು – ಎಲ್ಲರೂ ಬಂದರು.

ಕಣ್ವ ಅವರಿಗೆ ಕಾರುಣ್ಯದಿಂದ–

'ಅಕ್ಕರೇಲಿ ಸಾಕಿದ ನನ್ನ ಕೂಸು ಇದು. ಕಾಡಲ್ಲೇ ಹುಟ್ಟಿ ಕಾಡಲ್ಲೇ ಬೆಳೆದೋಳು. ಏನೂ ಅರೀದವಳು. ಈ ಆಶ್ರಮದಿಂದ ಆ ಕ್ಷತ್ರಿಯನ ಮನೇಗೆ ಇವಳನ್ನ ಬಿಟ್ಟು ಬನ್ನೀಪ್ಪ' ಅಂದ.

ಆಯಿತು ಅಂತ ಹೇಳಿ ಋಷಿಮುನಿಗಳು ಎದ್ದರು. ಶಕುಂತಲೇನ ಮುಂದಿಟ್ಟುಕೊಂಡು ದುಷ್ಯಂತನ ಊರ ಕಡೆ ಹೊರಟರು. ದೇವತೆಗೆ ಹುಟ್ಟಿದ್ದು ಅನಿಸೋ ಥರದ ಮಗನನ್ನ ಕರಕೊಂಡು ದುಷ್ಯಂತನಿಗೂ ಗೊತ್ತಿರುವ ಆ ಕಾಡ ದಾರೀಲಿ ಇವಳೂ ನಡೆದಳು.

ಎಳೀ ಸೂರ್ಯನ ಬೆಳಕಿನ ಕಳೆಯ ಆ ಮಗನನ್ನು ಕರಕೊಂಡು ಅರಮನೇಗೆ ನಡೆದಳು. ರಾಜನ ಕಡೆಯವರು ತಿಳಕೊಂಡು ಒಳಗೆ ಬಿಟ್ಟರು. ಅವಳನ್ನ ಅಲ್ಲೇ ಬಿಟ್ಟ ಇವರು ಆಶ್ರಮಕ್ಕೆ ವಾಪಸಾದರು.

ರಾಜನ ಮುಂದೆ ಇವಳು ಮಗನಿಗೆ 'ತಂದೇಗೆ ಕೈ ಮುಗಿ ಕಂದಾ' ಅಂದಳು. ಇವಳೂ ರಾಜನಿಗೆ ನಮಸ್ಕಾರ ಮಾಡಿ ಕಣ್ಣರಳಿಸಿಕೊಂಡು ರಾಜನನ್ನೇ ನೋಡತಾ ಇದ್ದಳು ನಾಚಿಕೇಲಿ ತಲೆ ತಗ್ಗಿಸಿಕೊಂಡು.

ಆಗ ದುಷ್ಯಂತ – 'ಏನು ಕಾರ್ಯದ ಮೇಲೆ ಬಂದೆ? ಚಿಂತೆ ಬೇಡ. ತಿಳಿಸು. ನಿನ್ನ ಮಗನಿಗಾಗಿ ನೆರವೇರಿಸಿಕೊಡತೀನಿ' ಅಂದ.

ಅದಕ್ಕೆ ಶಕುಂತಲೆ – 'ರಾಜಾ, ಇವನು ನಿನ್ನ ಮಗ. ನಿನ್ನಿಂದ ನನ್ನಲ್ಲಿ ಹುಟ್ಟಿದವನು, ದೇವತೆ ಥರ ಇದಾನೆ. ಮಾತು ಕೊಟ್ಟಿದ್ದೀಯಾ ಹಾಗೇ ನಡಕೋ. ಇವನಿಗೆ ಯುವರಾಜ ಪಟ್ಟ ಕಟ್ಟು. ನೀನು ಮನುಷ್ಯರಲ್ಲೇ ಮೇಲಾದವನು, ಕಣ್ವಾಶ್ರಮದಲ್ಲಿ ನನ್ನ ಕೂಡಿದಾಗ ಮಾತು ಕೊಟ್ಟಿದ್ದೆಯಲ್ಲಾ ನೆನಪಿಸಿಕೊ' ಅಂದಳು.


ರಾಜನಿಗೆ ಎಲ್ಲಾ ನೆನಪಿತ್ತು. ಆದರೂ 'ದುಷ್ಟ ತಾಪಸಿ – ಯಾರು ನೀನು – ನನಗೆ ಎಂಥದ್ದೂ ನೆನಪಿಲ್ಲ. ಧರ್ಮಕ್ಕಾಗಲೀ ಅರ್ಥಕ್ಕಾಗಲೀ ಕಾಮಕ್ಕೇ ಆಗಲೀ ನಾನು ನಿನ್ನ ಸಹವಾಸ ಮಾಡಿದ್ದು ನೆನಪಿಲ್ಲ. ಬೇಕಾದರೆ ಇರು, ಬೇಡದೆ ಇದ್ದರೆ ಹೋಗು–ನಿನ್ನಿಷ್ಟ' ಅಂದ.

ಅದನ್ನು ಕೇಳಿ ಅವಳಿಗೆ ನಾಚಿಕೇಲಿ ಎಚ್ಚರ ತಪ್ಪಿದ ಹಾಗಾಯಿತು. ದುಃಖದಲ್ಲಿ ಮರದ ದಿಮ್ಮಿಯ ಹಾಗೆ ನಿಂತು ಬಿಟ್ಟಳು.

ಒಳಗೇ ಕೋಪ ಉಕ್ಕುತಾ ಕಣ್ಣು ಕೆಂಪಗಾಯಿತು–ತುಟಿ ತೆಕೋತಾ ಇತ್ತು. ಕೊನೆಗಣ್ಣಲ್ಲೇ ರಾಜನನ್ನು ಸುಡೋ ಹಾಗೆ ತೀಕ್ಷ್ಣವಾಗಿ ನೋಡಿದಳು.

ಕೋಪದಿಂದ ಭುಗಿಲೆದ್ದ ತನ್ನ ಮನಸಿನ ನಿಜರೂಪದ ವಿಕಾರಾನ ಅದುಮಿಟ್ಟು ತನ್ನ ತಪಸಿನಿಂದ ಬೆಳಕು ತಂದುಕೊಂಡಳು.

ಆ ಶೋಕ ಆ ಕೋಪದಲ್ಲಿ ಒಂದರಗಳಿಗೆ ಒಳಗೇ ಆಲೋಚಿಸಿ ಆಮೇಲೆ ಗಂಡನನ್ನು ನೋಡತಾ ಕೋಪದಿಂದಲೇ–



**ಶಕುಂತಲೆ:** 'ಮಹಾರಾಜ, ನಿನಗೆ ಖಂಡಿತಾ ತಿಳಿದಿದೆ. ಆದರೂ ಯಾಕೆ ಹೊರಗಿನವನ ಹಾಗೆ ಮಾತಾಡತೀಯಾ. ಸಾಮಾನ್ಯರ ಹಾಗೆ ಸುಳ್ಳು ಹೇಳತೀಯಾ. ನಿನ್ನ ಹೃದಯಕ್ಕೆ ನಿಜವೂ ಗೊತ್ತು ಸುಳ್ಳೂ ಗೊತ್ತು. ಎರಡಕ್ಕೂ ಅದೇ ಸಾಕ್ಷಿ. ನಿನಗೆ ನೀನೇ ಯಾಕೆ ಅವಮಾನ ಮಾಡಿಕೋತೀಯಾ. ಒಳಗೊಂದು ಇಟ್ಟುಕೊಂಡು ಹೊರಗೆ ಬೇರೆ ಥರ ಕಾಣೋನು ವಂಚಕ. ತನ್ನ ದರೋಡೆ ತಾನೇ ಮಾಡಿಕೋತಾನೆ ಅವನು. ನಿನ್ನ ಎದೆ ಒಳಗೆ ನೀನೊಬ್ಬನೇ ಇದೀನಿ ಅಂದುಕೊಂಡಿದೀಯಾ? ಅದರೊಳಗೆ ಪೂರ್ವಿಕ ಮುನಿ ಇರತಾನೆ. ಅವನಿಗೆ ನಿನ್ನ ಪಾಪದ ಕೆಲಸ ಎಲ್ಲಾ ತಿಳಿದಿರತ್ತೆ.

ಪಾಪ ಮಾಡಿದವನು ಯಾರಿಗೂ ಗೊತ್ತಾಗಲ್ಲ ಅಂದುಕೊಂಡಿರತಾನೆ. ಆದರೆ ಅವನೊಳಗೇ ಒಬ್ಬ, ಎಲ್ಲಾ ನೋಡುವವನು ಇರತಾನಲ್ಲ– ಅವನಿಗೆ ತಿಳಿದಿರತ್ತೆ.

ನಾನು ನನ್ನ ಗಂಡನನ್ನೇ ಎಲ್ಲಕ್ಕೂ ನೆಚ್ಚಿರೋಳು. ತಾನಾಗೇ ಬಂದಿದಾಳೆ ಅಂತ ತೊರೀಬೇಡ ನನ್ನ. ಒಳಗಿಟ್ಟುಕೋಬೇಕಾದವಳು, ಒಳಗೇ ಕರಕೋತಿಲ್ಲ ಯಾಕೆ? ನಾನು ನಿನ್ನ ಹೆಂಡತಿ. ಯಾರೋ ಬೀದೀಲಿ ಹೋಗೋಳು ಅನ್ನೋ ಥರ ಈ ಸಭೆ ಮುಂದೆ ನನ್ನ ಕಾಣತಿದೀಯಲ್ಲ. ನಾನು ಬೇಡತಿರೋದನ್ನ ನೀನು ನೆರವೇರಿಸದಿದ್ದರೆ ನಿನ್ನ ತಲೆ ನೂರು ಚೂರಾಗಿಬಿಡತ್ತೆ. ನಿನಗೆ ನನ್ನ ಮಾತು ತಟ್ಟತಾನೇ ಇಲ್ಲವಾ. ನಾನು ಬಯಲಲ್ಲಿ ಅರಚಿಕೋತಿದೀನಾ?

ಹೆಂಡತಿಯ ಒಳಕ್ಕೆ ಗಂಡ ಹೋಗಿ ಅವಳಿಂದ ಮರುಜನ್ಮ ಪಡೀತಾನೆ. ಅದಕ್ಕೇ ಕವಿಗಳು ಹೆಂಡತೀನ ಜಾಯಾಂ, ಜನ್ಮಕೊಡೋಳು ಅಂತ ಕರೀತಾರೆ. ಅವಳೊಳಗಿಂದ ಗಂಡಾಗಿ ಬರತ್ತಲ್ಲ ಆ ಮಗು, ಪ್ರೇತವಾಗಿ ಅಲೀತಿರ್ತಾರಲ್ಲ ಆ ನಿನ್ನ ತಾತ ಮುತ್ತಾತಂದಿರನ್ನೆಲ್ಲ ದಡ ಹತ್ತಿಸತ್ತೆ.

ಧರ್ಮ ಅರ್ಥ ಕಾಮಕ್ಕೆ ಹೆಂಡತೀನೇ ಬೇಕು.